ಕಾರ್ಯಕ್ರಮಗಳನ್ನು ಇಟ್ಟಿದ್ದೇವೆ. ಪ್ರಾಯಶಃ ಮುಂದೆ ದೇಶದಲ್ಲಿ ಇಷ್ಟು ಪ್ರಗತಿಪರವಾದ ಕಾರ್ಯಕ್ರಮ ಬೇರೆ ಎಲ್ಲಿಯೂ ಇಲ್ಲ ಎಂದು ನನಗೆ ಅನ್ನಿಸುತ್ತದೆ. ಮೂರು ಹಂತಗಳಲ್ಲಿ ಕಮಿಟಿಗಳನ್ನು ಮಾಡಿದ್ದೇವೆ. ಒಂದು District level task force, district level committee and State level Committee. ಈ ಮೂರು ಕಮಿಟಿಗಳನ್ನು ಜಿಲ್ಲಾಮಟ್ಟಕ್ಕಿಂತ ಕೆಳಮಟ್ಟದಲ್ಲಿರುವ ಎಲ್ಲಾ ರೋಗಗ್ರಸ್ಥವಾದ ಯೂನಿಟ್ಸ್ ಏನು ಇವೆ ಇವುಗಳಿಗೆ ಸಹಾಯ ಮಾಡಲಿಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇದರ ಜೊತೆಗೆ ನಮಗೆ ಸಹಕಾರ ಮಾಡಬೇಕಾದವರು ಯಾರು ಎಂದರೆ ಯಾರು ಯೂನಿಟ್ಸ್‌ಗಳಿಗೆ ಸಾಲವನ್ನು ಕೊಟ್ಟಿದ್ದಾರೆ ಅವರು. ಕೆಎಫ್‌ಸಿ ಯಾಗಲಿ, ಕೆಎಸ್‌ಎಫ್‌ಸಿ ಯಾಗಲಿ, ಅಥವಾ ರಾಷ್ಟ್ರೀಕೃತ ಬ್ಯಾಂಕ್ ಆಗಲಿ ಅವರು ನಮಗೆ ಸಹಕಾರ ಕೊಟ್ಟರೆ ಖಂಡಿತವಾಗಿ ಈ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುತ್ತೇವೆ. ಇದನ್ನು ಕಾರ್ಯರೂಪಕ್ಕೆ ತರಲಿಕ್ಕಾಗಿಯೇ ಕಮಿಟಿಗಳನ್ನು ನಾವು ಬೇರೆ-ಬೇರೆ ಹಂತದಲ್ಲಿ ಮಾಡಿದ್ದೇವೆಂದು ತಮ್ಮ ಮೂಲಕ ಮಾನ್ಯಸದಸ್ಯರಿಗೆ ತಿಳಿಸಲು ಇಚ್ಛಿಸುತ್ತೇನೆ.

ಶ್ರೀ ಇ. ಮಾರುತಿರಾವ್ ಪವಾರ್ : ಅವನಿಗೆ ಬಡ್ಡಿ ಕಟ್ಟುವುದಕ್ಕೆ ಬಂಡವಾಳದ ತೊಂದರೆಯಾಗುತ್ತದೆ. ಈ ನೀವು ಏನು ಕಮಿಟಿಗಳನ್ನು ಅಭಿವೃದ್ಧಿಪಡಿಸಲು ಮಾಡಿದ್ದೀರಿ ಅವು ಸರಿಯಾಗಿ ಕಾರ್ಯರೂಪಕ್ಕೆ ಬರುತ್ತಾ ಇಲ್ಲ. ನೀವು 89 ಸಣ್ಣ ಕೈಗಾರಿಕೆಗಳು ಮಾತ್ರ ರೋಗಗ್ರಸ್ತ ಕೈಗಾರಿಕೆಗಳು ಎಂದು ಹೇಳಿದ್ದೀರಿ, ನೀವು ನನ್ನ ಜೊತೆಗೆ ಮೈಸೂರಿಗೆ ಬಂದು ನೋಡಿ, ಇವತ್ತು ಶೇ 50ರಷ್ಟು ಲೋನ್ ತೆಗೆದುಕೊಂಡು ಮುಚ್ಚಿರುವಂಥ ಕಾರ್ಖಾನೆಗಳ ಬಗ್ಗೆ ಮಾತ್ರ ತಾವು ಹೇಳಿದ್ದೀರಿ. ಅಲ್ಲಿ ಬಂದು ನೋಡಿ ಶೇ 50ರಷ್ಟು ಕೈಗಾರಿಕೆಗಳು ಎಲ್ಲಾ ರೋಗಗ್ರಸ್ತವಾಗಿದೆ. ಇವುಗಳನ್ನು ಪುನಃಶೇತನಗೊಳಿಸಿದ್ದರೆ ಒಳ್ಳೆಯದಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಬಿ. ಎ. ಮೊಯ್ದೀನ್: ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸದಸ್ಯರ ಕಳಕಳಿಯನ್ನು ಅರ್ಥಮಾಡಿಕೊಂಡಿದ್ದೇನೆ. ಈ ಸಂಸ್ಥೆಗಳಿಗೆ ನಾವು ರಾಷ್ಟ್ರಮಟ್ಟದಲ್ಲಿ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. ಮಾನ್ಯ ಸದಸ್ಯರು ಮಾತನಾಡುತ್ತಾ ಇಂಟರೆಸ್ಟ್ ಬಗ್ಗೆ ಹೇಳಿದ್ದಾರೆ. ಇದು ನಮ್ಮ ಕೈಯಲ್ಲಿ ಮಾಡುವುದಕ್ಕಾಗುವ ಹಾಗೆ ಇಲ್ಲ. ಆದರೆ ಮಾನ್ಯ ಸದಸ್ಯರ ಕಳಕಳಿಗೆ ನಾನೂ ಕೂಡ ನನ್ನ ಸಹಮತವನ್ನು ವ್ಯಕ್ತ ಪಡಿಸುತ್ತೇನೆ. ಸಣ್ಣ ಕೈಗಾರಿಕೆಗಳಿಗೆ ಕೊಡತಕ್ಕಂಥ ಸಾಲದ ಮೇಲೆ ಇರತಕ್ಕಂಥ ಬಡ್ಡಿ ದರ ಕಡಿಮೆ ಆಗಬೇಕೆಂದು ಹೇಳಿ ರಾಷ್ಟ್ರಮಟ್ಟದಲ್ಲಿರತಕ್ಕಂಥ ಅವಕಾಶಗಳನ್ನು ಬಳಸಿಕೊಂಡು ನಾನು ಹೇಳಿದ್ದೇನೆ. ನಿಮ್ಮ ಅಭಿಪ್ರಾಯಕ್ಕೆ ನನ್ನ ಪೂರ್ಣ ಸಹಮತವಿದೆಯೆನ್ನುವ ಮಾತನ್ನು ಹೇಳಬಯಸುತ್ತೇನೆ.

ಜಗಳೂರು ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ

567 - ಶ್ರೀ ಎಂ. ಬಸಪ್ಪ (ಜಗಳೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಗಳೂರು ಪುರಸಭೆ (ಪುರ ಪಂಚಾಯ್ತಿ ಸಭೆ) ವ್ಯಾಪ್ತಿಯಲ್ಲಿ ಕಳೆದ ವರ್ಷ ಅತೀವವಾದ ನೀರಿನ ಅಭಾವವಿದ್ದು ಇರತಕ್ಕ ಬೋರ್‌ವೆಲ್‌ಗಳಲ್ಲಿ ಲೋಹಗಳಿಂದ ಕೂಡಿದ ಕಲುಷಿತ ನೀರಿನ ಅಂಶವಿದ್ದು, ಇದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅ) ತುಂಗಭದ್ರಾ ನದಿಯಿಂದ ನೀರನ್ನು ಪುರಸಭಾ ವ್ಯಾಪ್ತಿಯ, ಜನರಿಗೆ ಒದಗಿಸಲು ಯಾವುದೇ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆಯೇ ?

ಇ) ಈಗಾಗಲೇ ತುಂಗಭದ್ರ ನದಿಯಿಂದ ನೀರಿನ ವ್ಯವಸ್ಥೆ ಮಾಡಲು ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಇಲಾಖೆ ಸಮೀಕ್ಷೆ ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಸಮೀಕ್ಷೆ ಯಾವ ಹಂತದಲ್ಲಿದೆ ?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಜಗಳೂರು ಪುರಸಭೆ ವ್ಯಾಪ್ತಿಯಲ್ಲಿ ಕಳೆದ ವರ್ಷ ನೀರಿನ ಅಭಾವ ಇದ್ದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಲಭ್ಯವಿರುವ ಕೊಳವೆ ಬಾವಿಗಳಲ್ಲಿ ಲೋಹಗಳಿಂದ ಕೂಡಿದ ಕಲುಷಿತ ನೀರಿನ ಅಂಶ ಕಂಡು ಬಂದಿರುವುದಿಲ್ಲ.

ಆ) ತುಂಗಭದ್ರಾ ನದಿಯಿಂದ ಜಗಳೂರು ಪಟ್ಟಣಕ್ಕೆ ನೀರು ಸರಬರಾಜು ಮಾಡುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ. ಪಟ್ಟಣಕ್ಕೆ ನೀರಿನ ಬವಣೆಯನ್ನು ನಿವಾರಿಸಲು ಪಟ್ಟಣದಿಂದ 14 ಕಿ.ಮೀ. ದೂರದಲ್ಲಿರುವ ಸಂಗನಕೆರೆ ಸಮೀಪದಲ್ಲಿ ಬೋರ್‌ವೆಲ್‌ಗಳ ಮೂಲದಿಂದ ಪ್ರತಿದಿನಕ್ಕೆ ತಲಾ 70 ಲೀಟರ್‌ಗಳಷ್ಟು ನೀರು ಸರಬರಾಜು ಮಾಡುವ ರೇಖಾ ಅಂದಾಜನ್ನು ರೂ. 72 ಲಕ್ಷಕ್ಕೆ ತಯಾರಿಸಿದ್ದು, ಸದರಿ ಯೋಜನೆಯನ್ನು ಡ್ಯಾನಿಡಾ ಯೋಜನೆಯಡಿಯಲ್ಲ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಇ) ಇಲ್ಲ.

ಈ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಶ್ರೀ ಎಂ. ಬಸಪ್ಪ : ನೀರಿನ ಅಭಾವದಿಂದ ಜನರು ಬಹಳಷ್ಟು ತೊಂದರೆ ಪಡುತ್ತಿದ್ದಾರೆ ಎಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ. ಮೇಲಾಗಿ ಹೋದ ವರ್ಷ ನೀರಿನ ಅಭಾವದಿಂದ ಪುರಸಭೆಗೆ ಎಲ್ಲಾ ಜನಗಳು ಕೂಡ ಮೆರವಣಿಗೆ ಮಾಡುವ ಮುಖಾಂತರ ಪ್ರತಿಭಟನೆ ಮಾಡಿ ಪುರಸಭೆಯ ಕಟ್ಟಡವನ್ನು ದಾಖಿಲಾತಿಗಳ ಸಮೇತ ಸುಟ್ಟಿರತಕ್ಕಂಥ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ. ಈ ವರ್ಷ ಅದನ್ನು ಸರಿ ಮಾಡತಕ್ಕಂಥ ವ್ಯವಸ್ಥೆ ನಡೆಯುತ್ತಿದೆ. ಆದರೆ ನೀರಿನ ಅಭಾವವನ್ನು ಸರಿಪಡಿಸುವ ವ್ಯವಸ್ಥೆ ಇವೊತ್ತಿಗೂ ಕೂಡ ಆಗಿಲ್ಲ. ಅಲ್ಲಿರತಕ್ಕಂಥ ಬೋರ್‌ವೆಲ್‌ಗಳಲ್ಲಿ ಬರುವ ನೀರು ಸಂಪೂರ್ಣವಾಗಿ ಬ್ಲಾಕಿಷ್‌ವಾಟರ್ ಆಗಿದ್ದು ಅದು ಕ್ಲೋರೈಡ್ ಮತ್ತು ಸಲ್ಫೇಟ್ ಮಿಶ್ರಣವನ್ನು ಒಳಗೊಂಡಿರುತ್ತದೆ. ಇದನ್ನು ಕುಡಿಯುವುದಕ್ಕೆ ಸಾಧ್ಯವಿಲ್ಲ. ಆದ್ದರಲ್ಲೂ ಮುಖ್ಯವಾಗಿ ಜನಗಳಿಗೆ ಕಡಿಮೆ ವಯಸ್ಸಿನಲ್ಲೇ ಹೆಚ್ಚು ವಯಸ್ಸಾದಂತೆ ಕಾಣುತ್ತಿದ್ದಾರೆ, ಮೇಲಾಗಿ it is not palatable there is no development of bones, there is deterioration of bones ಹಲ್ಲುಗಳು ಉದುರುತ್ತಿವೆ, ತಲೆ ಕೂದಲು ಬೆಳ್ಳಿಗಾಗುತ್ತಿವೆ. ಈ ರೀತಿಯ ನೀರನ್ನು ಕೊಡಬಾರದು ಒಂದು ಉತ್ತಮವಾಗಿರತಕ್ಕಂಥ ವ್ಯವಸ್ಥೆಯನ್ನು ನೀರಿನ ಸೋರ್ಸನ್ನು ಕೊಡಬೇಕು ಎಂದು ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ದೇವೇಗೌಡರಿಗೆ ಒಂದು ಮನವಿಯನ್ನು ಕೊಟ್ಟೆ ಮತ್ತು ಇದಲ್ಲದೆ ಉಪಮುಖ್ಯಮಂತ್ರಿಯಾದ ಸಿದ್ದರಾಮಯ್ಯನವರೂ ಕೂಡ

ಅಲ್ಲಿಗೆ ಬಂದಿದ್ದಾಗ ಅವರಿಗೂ ಕೂಡ ಕೊಟ್ಟೆವು, ಆಗ ಅವರು ನಮ್ಮ ಅಹವಾಲನ್ನು ಕೇಳಿ ಈ ಊರಿಗೆ ನಿಜಕ್ಕೂ ಕೂಡ ನೀರಿಗಾಗಿ ಒಂದು ಶಾಶ್ವತವಾದ ವ್ಯವಸ್ಥೆಯನ್ನು ಮಾಡಬೇಕಾಗಿದೆ ಎಂದು ಹೇಳಿದರು. ತುಂಗಭದ್ರಾ ನದಿಯಿಂದ ಈ ನಗರಕ್ಕೆ ನೀರನ್ನು ತರುವ ಬಗ್ಗೆ ನಾನು ಹೇಳಿದ್ದೇನೆ. ಅದಕ್ಕೆ ಸಮೀಕ್ಷೆ ನಡೆಸಬೇಕೆಂದು ಹಿಂದಿನ ಮುಖ್ಯಮಂತ್ರಿಗಳೂ ಕೂಡ ಆರ್ಡರ್ ಮಾಡಿದ್ದಾರೆ. ಆದರೆ ಈ ಸಮೀಕ್ಷೆ ವಿಚಾರವನ್ನು ನಾನು ಇಂದು ಕೇಳಿದಾಗ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಿದ್ದಾರೆ. ಅಧಿಕಾರಿಗಳು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಆ ಸಮೀಕ್ಷೆಯನ್ನು ನಡೆಸಿ ಶಾಶ್ವತವಾದ ನೀರಿನ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ. ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವಂತೆ ಜಗಳೂರಿಗೆ ಹೊಳೆ ನೀರನ್ನು ಕೊಡುವುದಕ್ಕೆ ಹತ್ತಿರದಲ್ಲಿ ಯಾವುದೇ ಸೋರ್ಸ್ ಇರುವುದಿಲ್ಲ. ಆದುದರಿಂದ ಅಲ್ಲಿಗೆ ಕೊಳವೆ ಬಾವಿಗಳ ಮೂಲಕ ನೀರನ್ನು ಕೊಡುತ್ತಿದ್ದೇವೆ. ಆ ಕೊಳವೆ ಬಾವಿಗಳಿಂದ ಕೊಡುತ್ತಿರುವ ನೀರು ಲೋಹಗಳಿಂದ ಕೂಡಿದ್ದು ಕ್ಲೋರೈಡ್, ಸಲ್ಫೇಟ್‌ಗಳಿಂದ ಕೂಡಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆ ನೀರನ್ನು ಪೊಲ್ಯೂಷನ್ ಬೋರ್ಡ್‌ಗೆ ಪರೀಕ್ಷೆಗೆ ಕಳುಹಿಸಿದ್ದೆವು, ಅವರ ವರದಿ ಪ್ರಕಾರ ಯಾವುದೇ ಲೋಹಗಳಿಂದ ಆ ನೀರು ಕೂಡಿಲ್ಲವೆಂದು ತಿಳಿದುಬಂದಿದೆ. ಅದರಲ್ಲಿ ಕ್ಲೋರೈಡ್ ಅಥವಾ ಇತರ ಕಂಟೆಂಟ್ ಇಲ್ಲವೆಂದು ಹೇಳಲಾಗಿದೆ. ಆದರೆ ತಲೆ ಕೂದಲು ಬೆಳ್ಳಗಾಗುವಂಥದ್ದರ ಬಗ್ಗೆ ಮತ್ತು ಹಲ್ಲು ಉದುರುವಂಥದ್ದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಮಾನ್ಯ ಸದಸ್ಯರು ತುಂಗಭದ್ರಾ ನದಿಯಿಂದ ನೀರನ್ನು ಅಲ್ಲಿಗೆ ಒದಗಿಸುವ ಬಗ್ಗೆ ಹೇಳಿದ್ದಾರೆ.

ಅಧ್ಯಕ್ಷರು : ಹಲ್ಲುಗಳು ಒಂದೊಂದು ಊರಿನಲ್ಲಿ ಒಂದೊಂದು ಕಾರಣಕ್ಕೆ ಉದುರುತ್ತವೆ, ನಿಮ್ಮಲ್ಲಿ ನೀರು ಸರಿ ಇಲ್ಲದೇ ಉದುರುತ್ತದೆ, ನಮ್ಮ ಕಡೆ ಒಂದು ಕಾರಣಕ್ಕೆ ಉದುರುತ್ತದೆ.

ಶ್ರೀ ಬಿ. ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಅಲ್ಲಿ ನೀರಿನ ತೊಂದರೆ ಇದೆ. ಅಲ್ಲಿ ಕೂಡ ಸುಮಾರು 12 ರಿಂದ 15 ಸಾವಿರ ಜನಸಂಖ್ಯೆ ಇದೆ. ಬೇಸಿಗೆ ಕಾಲದಲ್ಲಿ ನೀರು ಡ್ರೈ ಆಗಿ ಅಲ್ಲಿ ಬೋರ್‌ವೆಲ್‌ನಲ್ಲಿ ನೀರು ಇಲ್ಲದೇ ಇರುವುದರಿಂದ ತೊಂದರೆಯಾಗಿದೆ. ಆದರೆ ಅವರು ತುಂಗಭದ್ರಾ ನದಿ ಸೋರ್ಸ್ ಬಗ್ಗೆ ಅವರು ಹೇಳಿದ್ದಾರೆ, ಆದರೆ 60 ಕಿ.ಮೀ. ದೂರದಲ್ಲಿದ್ದು ಇದಕ್ಕೆ 10 ಕೋಟಿ ರೂ.ಗಳು ಖರ್ಚಾಗುತ್ತದೆ. 15 ಸಾವಿರ ಜನಸಂಖ್ಯೆಗೆ 60 ಕಿ.ಮೀ. ದೂರದಿಂದ ಪೈಪ್‌ಲೈನ್ ತಂದು ನೀರನ್ನು ಕೊಡುವುದಕ್ಕೆ ಸಾಧ್ಯವಿಲ್ಲದೇ ಇರುವುದರಿಂದ ಪಟ್ಟಣಕ್ಕೆ 15 ಕಿ.ಮೀ. ದೂರದಲ್ಲಿ ಸಂಗೇನಹಳ್ಳಿ ಎನ್ನುವ ಒಂದು ಜಲಾಶಯವಿದೆ. ಅದರ ಸುತ್ತಮುತ್ತಲೂ ಬೋರ್‌ವೆಲ್‌ಗಳನ್ನು ಕೊರೆದರೆ ನೀರು ಸಿಗುತ್ತದೆ ಎಂದು ಉಪಗ್ರಹದ ರಿಮೋಟ್ ಸೆನ್ಸ್ ಮೂಲಕ ತಿಳಿದುಕೊಂಡು ಅಲ್ಲಿ 72 ಲಕ್ಷ ರೂ. ಗಳನ್ನು ಖರ್ಚು ಮಾಡಿ ನೀರನ್ನು ಕೊಡುವುದಕ್ಕೆ ಈಗಾಗಲೇ ಯೋಜನೆ ಸಿದ್ಧವಾಗಿ ಆ ಯೋಜನೆಯನ್ನು 'ಡ್ಯಾನಿಡಾ' ದವರಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. 'ಡ್ಯಾನಿಡಾ' ದವರು ಮುಂದೆ ಬಂದು 20 ಸಾವಿರ ಜನಸಂಖ್ಯೆ ಇರುವ ಸುಮಾರು 15 ರಿಂದ 20 ಪಟ್ಟಣ ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡು ಶೇಕಡ 100ರಷ್ಟು ಗ್ರ್ಯಾಂಟನ್ನು 'ಎಡ್' ರೂಪದಲ್ಲಿ

ಕೊಡುತ್ತೇವೆಂದು ಹೇಳಿದ್ದಾರೆ. ಆದುದರಿಂದ ಈ ಬಗ್ಗೆ ಗಮನಹರಿಸಿ ಯಾವ ಕಡೆ ನೀರಿನ ಸಮಸ್ಯೆ ತೀವ್ರವಾಗಿದೆ ಅಂಥ 20 ಪಟ್ಟಣ ಪ್ರದೇಶಗಳನ್ನು ಸರ್ಕಾರದವರಾದ ನಾವು ಆಯ್ಕೆ ಮಾಡಿಕೊಂಡು ಡ್ಯಾನಿಡಾದವರಿಗೆ ಕೊಡುತ್ತಿದ್ದೇವೆ. ಆ ಯೋಜನೆಗೆ ಡ್ಯಾನಿಡಾದವರು ಮಂಜೂರಾತಿಯನ್ನು ಕೊಡುತ್ತಾರೆ. ಈಗಾಗಲೇ ಇವರು ರೂರಲ್ ಡೆವಲಪ್‌ಮೆಂಟ್‌ಗೆ ಕೊಟ್ಟಿದ್ದಾರೆ, ಫಿಷರೀಸ್‌ಗೆ ಕೊಟ್ಟಿದ್ದಾರೆ. ಅದೇ ರೀತಿ ನಮಗೂ ಮೊದಲನೇ ಬಾರಿಗೆ ಏಡ್ ಕೊಡುತ್ತೇವೆಂದು ಡ್ಯಾನಿಡಾದವರು ಹೇಳಿರುವುದರಿಂದ ನಾವು ಈ ಯೋಜನೆಯನ್ನು ಡ್ಯಾನಿಡಾದವರಿಗೆ ಕಳುಹಿಸಿ ಜಗಳೂರಿನಲ್ಲಿ ಏನು ನೀರಿನ ತೊಂದರೆಯಾಗಿದೆ ಈಗಾಗಲೇ 72 ಲಕ್ಷ ರೂ. ಗಳನ್ನು ಅದಕ್ಕೆ ಒದಗಿಸಿ ಇದಕ್ಕಾಗಿ ಏನು ಸರ್ವೇ ಕಾರ್ಯವನ್ನು ಮಾಡಿದ್ದೇವೆ ಆ ಪ್ರಕಾರ ನಾವು ಕೆಲಸವನ್ನು ಮಾಡಿಕೊಡುತ್ತೇವೆ.

ಶ್ರೀ ಎಂ. ಬಸಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಾತನಾಡಿ ಡ್ಯಾನಿಡಾ ಸಂಸ್ಥೆಯ ಮೂಲಕ ಸಂಗೇನಹಳ್ಳಿ ಸಮೀಪ ಬೋರ್‌ಗಳನ್ನು ಹಾಕಿ ನೀರನ್ನು ಒದಗಿಸುತ್ತೇವೆ ಎಂದು ಏನು ಹೇಳಿದ್ದಾರೆ ಅದು ನಿಜಕ್ಕೂ ಕೂಡ ಶಾಶ್ವತವಾದ ಪರಿಹಾರವಲ್ಲ. ಅಲ್ಲಿಯ ಸುತ್ತಮುತ್ತಲೂ ಇರತಕ್ಕಂಥ ಹಳ್ಳಿಗಳಲ್ಲಿ ಬೋರ್‌ವೆಲ್‌ಗಳು ಬೇಸಿಗೆಯಲ್ಲಿ ಫೇಲ್ಯೂರ್ ಆಗುತ್ತಿರುವುದರಿಂದ ಇದರ ಬಗ್ಗೆ ಎಕ್ಸ್‌ಪರಿಮೆಂಟ್‌ನಲ್ಲಿ ಈಗಾಗಲೇ ವಿಷಯ ತಿಳಿದಿರುವುದರಿಂದ ಅಲ್ಲಿಯ ಸುತ್ತಮುತ್ತಲೇ ಬೋರ್‌ಗಳನ್ನು ಹಾಕಿಸಿ 15 ಕಿ. ಮೀ. ದೂರದಲ್ಲಿರುವ ಜಗಳೂರಿಗೆ ನೀರನ್ನು ಒದಗಿಸಿಕೊಡುವ ಯೋಜನೆ ಸಂಪೂರ್ಣವಾಗಿ ಶಾಶ್ವತವಾಗಿ ಪರಿಹಾರವಾಗುವುದಿಲ್ಲ. ಅದಕ್ಕೂ ಮೇಲಾಗಿ ನೀವು ತುಂಗಭದ್ರಾ ನದಿಯಿಂದ ತೆಗೆದರೂ ಕೂಡ ಜಗಳೂರು ಹತ್ತಿರದಲ್ಲೇ ತುಂಗಭದ್ರಾ ಬಲದಂಡೆ ಕಾಲುವೆ ಹೋಗುತ್ತಿದೆ. ಈ ಕಾಲುವೆಯಿಂದಲಾದರೂ ಜಗಳೂರಿಗೆ ನೀರನ್ನು ಒದಗಿಸಬಹುದು ಎಂಬ ಬಗ್ಗೆ ತಾವು ಸಮೀಕ್ಷೆ ಮಾಡಿಸಿ ನೀರನ್ನು ಒದಗಿಸುವ ಸಂಬಂಧ ವಿಚಾರವನ್ನು ನಮಗೆ ಹೇಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ. ಎನ್. ಬಚ್ಚೇಗೌಡ : ಒಳ್ಳೆಯ ಸಲಹೆ, ಆ ಬಗ್ಗೆ ಸಮೀಕ್ಷೆ ಮಾಡಿಸಿ ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ.

ವಿಜಾಪುರ ಜಿಲ್ಲೆಯಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ಸಹಾಯ ಧನ

568 - ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿಜಾಪುರ ಜಿಲ್ಲೆಯಲ್ಲಿರುವ ಸಣ್ಣ ಕೈಗಾರಿಕೆಗಳು ಎಷ್ಟು? ಅವುಗಳಲ್ಲಿ ಎಷ್ಟು ಮುಚ್ಚಿವೆ? ಅದಕ್ಕೆ ಕಾರಣವೇನು?*

ಆ) *ಜಿಲ್ಲೆಗೆ ಸಂಬಂಧಪಟ್ಟಂತೆ ಸಣ್ಣ ಕೈಗಾರಿಕೆಗಳಿಗೆ ಈವರೆಗೆ ಸರ್ಕಾರವು ಕೊಡಬೇಕಾಗಿರುವ ಸಹಾಯಧನ ಎಷ್ಟು?*

ಶ್ರೀ ಬಿ. ಎ. ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು) :